**All India Radio: Bangalore**
**National Bulletin In Kannada**
**11.05.2026 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**11.05.2026 07.35 a.m.**

**<><><><>**

ಮುಖ್ಯಾಂಶಗಳು

1. ಸೋಮನಾಥ ಅಮೃತ ಪರ್ವದಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಭಾಗಿ
2. ಅಸ್ಸಾಂನಲ್ಲಿ ಹೊಸ ಸರ್ಕಾರ ರಚಿಸಲು ಹಿಮಂತ್ ಬಿಸ್ವಾ ಶರ್ಮಾ ಅವರಿಗೆ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಆಹ್ವಾನ
3. ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಭಾರತಕ್ಕೆ ಮೂರನೇ ಸ್ಥಾನ: ಮಾರ್ಗನ್ ಸ್ಟ್ಯಾನ್ಲಿ ವರದಿ
4. ಐಪಿಎಲ್ ಟಿ-೨೦ ಕ್ರಿಕೆಟ್ : ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ೨ ವಿಕೆಟ್‌ಗಳ ರೋಚಕ ಜಯ

<><><><>

ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವವುಳ್ಳ ಸೋಮನಾಥ ಮಹಾದೇವ ದೇವಾಲಯದ ಪುನರ್‌ನಿರ್ಮಾಣವು ೭೫ ವರ್ಷಗಳನ್ನು ಪೂರೈಸಿರುವ ಅಂಗವಾಗಿ ಸೋಮನಾಥ ಅಮೃತ ಪರ್ವದಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಸೋಮನಾಥನಿಗೆ ಪ್ರಾರ್ಥನೆ ಸಲ್ಲಿಸಲಿರುವ ಪ್ರಧಾನಿ, ಕುಂಭಾಭಿಷೇಕ ಸೇರಿದಂತೆ ಇತರೆ ವಿಧಿವಿಧಾನವನ್ನು ನೆರವೇರಿಸಲಿದ್ದಾರೆ. ನಂತರ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಲಿದ್ದಾರೆ. ಇದೇ ವೇಳೆ ಪ್ರಧಾನಿ ರೋಡ್ ಶೋ ವನ್ನು ಕೂಡ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಉಪಮುಖ್ಯಮಂತ್ರಿ ಹರ್ಷ ಸಂಘವಿ ಕೂಡ ಉಪಸ್ಥಿತರಿರಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಜಾಮ್‌ನಗರದಿಂದ ಸೋಮನಾಥಕ್ಕೆ ವಿಮಾನದ ಮೂಲಕ ಆಗಮಿಸಲಿದ್ದಾರೆ. ಹೆಲಿಪ್ಯಾಡ್‌ನಲ್ಲಿ ಇಳಿದ ನಂತರ, ವೀರ್ ಹಮೀರ್ಜಿ ಗೋಹಿಲ್ ವೃತ್ತದವರೆಗೆ ರೋಡ್ ಶೋ ಮೂಲಕ ತೆರಳಲಿರುವ ಪ್ರಧಾನಿ ಅವರನ್ನು ಸಾರ್ವಜನಿಕರು ಸ್ವಾಗತಿಸಲಿದ್ದಾರೆ. ನಂತರ, ಸೋಮನಾಥ ದೇವಾಲಯದ ಪುನರ್‌ನಿರ್ಮಾಣದ

ಪ್ರಮುಖ ರೂವಾರಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಗೆ ಪ್ರಧಾನಿ ಪುಷ್ಪ ನಮನ ಸಲ್ಲಿಸಲಿದ್ದಾರೆ. ಬಳಿಕ ದೇವಾಲಯದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಿದ್ದು ದೇವಾಲಯದ ಶಿಖರದ ಮೇಲೆ ಕುಂಭಾಭಿಷೇಕ ಸಮಾರಂಭ ಮತ್ತು ಧ್ವಜಾರೋಹಣವನ್ನು ಸಹ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ, ಭಾರತೀಯ ವಾಯುಪಡೆಯ ಸೂರ್ಯ ಕಿರಣ್ ಏರೋಬ್ಯಾಟಿಕ್ ತಂಡವು ಸೋಮನಾಥ ದೇವಾಲಯದ ಆಗಸದಲ್ಲಿ ರೋಮಾಂಚಕ ವೈಮಾನಿಕ ಪ್ರದರ್ಶನವನ್ನು ಪ್ರಸ್ತುತಪಡಿಸಲಿದೆ. ಈ ಸಂದರ್ಭದಲ್ಲಿ ಪ್ರಧಾನಮಂತ್ರಿಯವರು ಸೋಮನಾಥನ ಶ್ರೀಮಂತ ಪರಂಪರೆ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಸ್ಮರಿಸುವ ಅಂಚೆಚೀಟಿ ಮತ್ತು ನಾಣ್ಯವನ್ನು ಬಿಡುಗಡೆ ಮಾಡಲಿದ್ದಾರೆ.

<><><><>

ಅಸ್ಸಾಂ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಮುಖ್ಯಮಂತ್ರಿಯಾಗಿ ಆಯ್ಕೆಯಾದ ಹಿಮಂತ ಬಿಸ್ವಾ ಶರ್ಮಾ ಅವರನ್ನು ರಾಜ್ಯದಲ್ಲಿ ಹೊಸ ಸರ್ಕಾರ ರಚಿಸಲು ಆಹ್ವಾನಿಸಿದ್ದಾರೆ. ಇದರೊಂದಿಗೆ ಅಸ್ಸಾಂನಲ್ಲಿ ಎನ್‌ಡಿಎ ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಬರುತ್ತಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಆಯ್ಕೆಯಾದ ನಂತರ, ಹಿಮಂತ್ ಬಿಸ್ವಾ ಶರ್ಮಾ ಅವರು ಮೈತ್ರಿಕೂಟದ ನಾಯಕರೊಂದಿಗೆ ಲೋಕ ಭವನದಲ್ಲಿ ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರ ರಚಿಸಲು ಔಪಚಾರಿಕವಾಗಿ ಹಕ್ಕು ಮಂಡಿಸಿದ್ದರು. ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ನಾಳೆ ಹಿಮಂತ್ ಬಿಸ್ವಾ ಶರ್ಮಾ ಮತ್ತು ಹೊಸ ಮಂತ್ರಿ ಮಂಡಳಿಯ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಖಾನಪಾರದ ಪಶುವೈದ್ಯಕೀಯ ಕಾಲೇಜು ಆಟದ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಬಿಜೆಪಿ ಅಧ್ಯಕ್ಷ ನಿತಿನ್ ನಬಿನ್ ಸೇರಿದಂತೆ ಇತರರು ಭಾಗವಹಿಸುವ ನಿರೀಕ್ಷೆಯಿದೆ. ಬಿಜೆಪಿ, ಅಸ್ಸಾಂ ಗಣ ಪರಿಷತ್ -ಎಜಿಪಿ ಮತ್ತು ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್ -ಬಿಪಿಎಫ್ ಒಳಗೊಂಡ ಎನ್‌ಡಿಎ, ೧೨೬ ಸದಸ್ಯರ ವಿಧಾನಸಭೆಯಲ್ಲಿ ೧೦೨ ಸ್ಥಾನಗಳನ್ನು ಗೆಲ್ಲುವ ಮೂಲಕ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಬಹುಮತ ಗಳಿಸಿದೆ. ಬಿಜೆಪಿ ೮೨ ಸ್ಥಾನಗಳನ್ನು ಜಯಿಸಿದ್ದರೆ, ಎಜಿಪಿ ಮತ್ತು ಬಿಪಿಎಫ್ ತಲಾ ೧೦ ಸ್ಥಾನಗಳನ್ನು

ಗಳಿಸಿದ್ದವು. ೨೦೨೧ ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಹಿಮಂತ್ ಬಿಸ್ವಾ ಶರ್ಮಾ, ಅಸ್ಸಾಂನಲ್ಲಿ ಸತತ ಎರಡು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಮೊದಲ ಕಾಂಗ್ರೆಸ್ಸೇತರ ನಾಯಕರಾಗಲಿದ್ದಾರೆ. ಎಜಿಪಿ ಮುಖ್ಯಸ್ಥ ಅತುಲ್ ಬೋರಾ ಮತ್ತು ಬಿಪಿಎಫ್ ನಾಯಕ ರಿಹಾನ್ ಡೈಮರಿ ಕೂಡ ರಾಜ್ಯಪಾಲರಿಗೆ ಬೆಂಬಲ ಪತ್ರಗಳನ್ನು ಸಲ್ಲಿಸಿದ್ದರು. ೨೦೧೬ ರಲ್ಲಿ ಆಗಿನ ಮುಖ್ಯಮಂತ್ರಿ ಸರ್ಬಾನಂದ ಸೋನೋವಾಲ್ ನೇತೃತ್ವದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ ಅಧಿಕಾರಕ್ಕೆ ಬಂದ ನಂತರ ಇದು ರಾಜ್ಯದಲ್ಲಿ ಎನ್‌ಡಿಎಯ ಸತತ ಮೂರನೇ ಅವಧಿಯಾಗಿದೆ.

<><><>

ನವೀಕರಿಸಬಹುದಾದ ಇಂಧನ ಸ್ಥಾಪಿತ ಸಾಮರ್ಥ್ಯದಲ್ಲಿ ಭಾರತ ಈಗ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ ಎಂದು ಮಾರ್ಗನ್ ಸ್ಟಾನ್ಲಿಯ ಹೊಸ ವರದಿ ತಿಳಿಸಿದೆ. ಭಾರತದ ನವೀಕರಿಸಬಹುದಾದ ಇಂಧನ ಪರಿವರ್ತನೆಯು ಬಾಹ್ಯ ಅವಲಂಬನೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಆದರೆ ಅದರ ಯಶಸ್ಸು ದೇಶವು ಸೌರ ಘಟಕಗಳು, ವೇಫರ್‌ಗಳು ಮತ್ತು ಪಾಲಿಸಿಲಿಕಾನ್‌ನಂತಹ ನಿರ್ಣಾಯಕ ಭಾಗಗಳನ್ನು ಎಷ್ಟು ಬೇಗನೆ ಸ್ಥಳೀಕರಿಸುತ್ತದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ ಎಂದು ವರದಿ ಹೇಳಿದೆ. ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಮಾಹಿತಿಯ ಪ್ರಕಾರ, ದೇಶೀಯ ಸೌರ ಮಾಡ್ಯೂಲ್ ಸಾಮರ್ಥ್ಯವು ಮಾರ್ಚ್ ೨೦೨೪ ರಲ್ಲಿ ೩೮ ಗಿಗಾವ್ಯಾಟ್‌ಗಳಿಂದ ಮಾರ್ಚ್ ೨೦೨೫ ರಲ್ಲಿ ೭೪ ಗಿಗಾವ್ಯಾಟ್‌ಗಳಿಗೆ ದ್ವಿಗುಣಗೊಂಡಿದೆ. ಸೌರ ಕೋಶ ಸಾಮರ್ಥ್ಯವು ೯ ಗಿಗಾವ್ಯಾಟ್‌ಗಳಿಂದ ೨೫ ಗಿಗಾವ್ಯಾಟ್‌ಗಳಿಗೆ ಹೆಚ್ಚಾಗಿದೆ. ಭಾರತವು ಇನ್ನೂ ಪ್ರಮುಖ ಅಪ್‌ಸ್ಟ್ರೀಮ್ ಘಟಕಗಳಿಗೆ ಆಮದಿನ ಮೇಲೆ ಹೆಚ್ಚು ಅವಲಂಬಿತವಾಗಿದೆ. ೨೦೨೫ ರ ಹಣಕಾಸು ವರ್ಷದಲ್ಲಿ, ಭಾರತವು ಸುಮಾರು ೧.೬ ಶತಕೋಟಿ ಡಾಲರ್ ಮೌಲ್ಯದ ಸುಮಾರು ೩೫ ಮಿಲಿಯನ್ ಸೌರ ಮಾಡ್ಯೂಲ್‌ಗಳನ್ನು ಆಮದು ಮಾಡಿಕೊಂಡಿದೆ. ಅದರಲ್ಲಿ ಅಂದಾಜು ೬೦ ರಿಂದ ೮೦ ಪ್ರತಿಶತವನ್ನು ಚೀನಾದಿಂದ ಪಡೆಯಲಾಗಿದೆ. ಒಟ್ಟಾರೆಯಾಗಿ, ಭಾರತದಲ್ಲಿ ನವೀಕರಿಸಬಹುದಾದ ಇಂಧನ ಸಾಮರ್ಥ್ಯವು ಈಗ ಒಟ್ಟು ಸ್ಥಾಪಿತ ಸಾಮರ್ಥ್ಯದ ೫೦ ಪ್ರತಿಶತವನ್ನು ದಾಟಿದೆ.

<><><>

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಇಂದು ರಾಜ್ಯ ಸಚಿವ ಸಂಪುಟ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಇಂದು ಬೆಳಿಗ್ಗೆ ೧೧ ಗಂಟೆಗೆ ಮುಖ್ಯಮಂತ್ರಿ ಸುವೇಂದು

ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಂಪುಟ ಸಭೆಯಲ್ಲಿ ಶನಿವಾರ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಮುಖ್ಯಮಂತ್ರಿ ಅವರೊಂದಿಗೆ ಪ್ರಮಾಣ ವಚನ ಸ್ವೀಕರಿಸಿದ ಐದು ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡುವ ಸಾಧ್ಯತೆಯಿದೆ. ಜೊತೆಗೆ ಚುನಾವಣಾ ಭರವಸೆಗಳ ಬಗ್ಗೆ ಚರ್ಚಿಸುವ ನಿರೀಕ್ಷೆಯಿದೆ.

<><><><>

ಹೊಸದಾಗಿ ಆಯ್ಕೆಯಾದ ತಮಿಳುನಾಡು ವಿಧಾನಸಭೆಯ ಮೊದಲ ಅಧಿವೇಶನ ಇಂದು ಆರಂಭವಾಗಲಿದೆ. ಹಂಗಾಮಿ ಸ್ಪೀಕರ್ ಎಂ.ವಿ. ಕರುಪ್ಪಯ್ಯ ಅವರು ಹೊಸದಾಗಿ ಆಯ್ಕೆಯಾದ ಶಾಸಕರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ. ಎಲ್ಲಾ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದ ನಂತರ ಇಂದು ಅಥವಾ ನಾಳೆ ಸ್ಪೀಕರ್ ಆಯ್ಕೆಯಾಗಲಿದ್ದಾರೆ. ತಮಿಳಗ ವೆಟ್ರಿ ಕಳಗಂ-ಟಿವಿಕೆ ಮುಖ್ಯಸ್ಥ ಸಿ.ಜೋಸೆಫ್ ವಿಜಯ್ ನೇತೃತ್ವದ ಹೊಸ ಸರ್ಕಾರ ಇದೇ ೧೩ನೇ ತಾರಿಖೀನೊಳಗೆ ಮೊದಲು ತಮ್ಮ ಬಹುಮತವನ್ನು ಸಾಬೀತುಪಡಿಸಬೇಕಾಗುತ್ತದೆ.

<><><><>

ರಾಯ್‌ಪುರದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್‌ನಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು ೨ ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ ನಿಗದಿತ ೨೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೧೬೬ ರನ್ ಗಳಿಸಿತು. ೧೬೭ ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಕೊನೆಯ ಓವರ್‌ನ ಕೊನೆಯ ಬಾಲ್‌ಗೆ ಗುರಿ ತಲುಪಿ ಗೆಲುವಿನ ನಗೆ ಬೀರಿತು. ಚೆನ್ನೈನ ಚೇಪಾಕ್ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಮೊದಲ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಚೆನ್ನೈ ಸೂಪರ್ ಕಿಂಗ್ಸ್ ೫ ವಿಕೆಟ್‌ಗಳ ಗೆಲುವು ದಾಖಲಿಸಿದೆ. ಧರ್ಮಶಾಲಾದಲ್ಲಿ ಇಂದು ನಡೆಯಲಿರುವ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ.

<><><><>

ಇಂದಿನಿಂದ ಗುಜರಾತ್‌ನ ಗಾಂಧಿನಗರದಲ್ಲಿ ೨೦೨೬ರ ಪ್ರತಿಷ್ಠಿತ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್ ಪಂದ್ಯಾವಳಿಗಳು ಆರಂಭವಾಗಲಿದೆ. ೪೪ ವರ್ಷಗಳಲ್ಲಿ ದೇಶವು ಮೊದಲ

ಬಾರಿಗೆ ಈ ಕ್ರೀಡಾಕೂಟವನ್ನು ಆಯೋಜಿಸುತ್ತಿದೆ. ಕ್ರೀಡಾಕೂಟವು ಇದೇ ೧೭ ರಂದು ಮುಕ್ತಾಯಗೊಳ್ಳಲಿದೆ. ೨೮ ದೇಶಗಳಿಂದ ಸುಮಾರು ೧೮೦ ಕ್ರೀಡಾಪಟುಗಳು ಏಷ್ಯಾದ ಅತಿದೊಡ್ಡ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಸ್ಪರ್ಧಿಸಲಿದ್ದಾರೆ. ಇದು ಮುಂಬರುವ ಕಾಮನ್‌ವೆಲ್ತ್ ಕ್ರೀಡಾಕೂಟ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಭಾರತ, ಚೀನಾ ಮತ್ತು ಶ್ರೀಲಂಕಾ ತಲಾ ೧೬ ಲಿಫ್ಟರ್‌ಗಳನ್ನು ಹೊಂದಿರುವ ಅತಿದೊಡ್ಡ ತಂಡಗಳನ್ನು ಕಣಕ್ಕಿಳಿಸಲಿದ್ದು, ಚೈನೀಸ್ ತೈಪೆಯಿಂದ ೧೫ ಲಿಫ್ಟರ್‌ಗಳು ಭಾಗವಹಿಸಲಿದ್ದಾರೆ. ಭಾರತದ ಅಭಿಯಾನವನ್ನು ಬಿಂದ್ಯಾರಾಣಿ ದೇವಿ ಮತ್ತು ಅಜಿತ್ ನಾರಾಯಣ ಅವರಂತಹ ಅನುಭವಿ ಲಿಫ್ಟರ್‌ಗಳು, ನಿರುಪಮಾ ದೇವಿ, ಲವ್‌ಪ್ರೀತ್ ಸಿಂಗ್ ಮತ್ತು ಬೆದಬರತ್ ಭರಾಲಿ ನೇತೃತ್ವ ವಹಿಸಲಿದ್ದಾರೆ.

<><><><>

ಜೆಡ್ಡಾದಲ್ಲಿ ನಿನ್ನೆ ನಡೆದ ಎಎಫ್‌ಸಿ ೧೭ ವರ್ಷದೊಳಗಿನವರ ಏಷ್ಯನ್ ಕಪ್‌ನ ಗ್ರೂಪ್ 'ಡಿ' ಎರಡನೇ ಫುಟ್‌ಬಾಲ್ ಪಂದ್ಯದಲ್ಲಿ ಭಾರತವು ಉಜ್ಬೇಕಿಸ್ತಾನ್ ವಿರುದ್ಧ ೩-೦ ಅಂತರದ ಸೋಲನ್ನು ಅನುಭವಿಸಿತು. ಇದರೊಂದಿಗೆ ಫಿಫಾ ೧೭ ವರ್ಷದೊಳಗಿನವರ ವಿಶ್ವಕಪ್‌ಗೆ ಅರ್ಹತೆ ಪಡೆಯುವ ಭಾರತದ ಭರವಸೆಗಳು ಕೊನೆಗೊಂಡಿವೆ. ಪಂದ್ಯದ ೩೨ನೇ ನಿಮಿಷದಲ್ಲಿ ಲಜೀಜ್ ಅಬ್ದುರೈಮೊವ್ ಮತ್ತು ೭೮ನೇ ನಿಮಿಷದಲ್ಲಿ ಅಖ್ರೋರ್ಬೆಕ್ ರಾವ್ಶ್ಯಾನ್‌ಬೆಕೋವ್ ಗಳಿಸಿದ ಗೋಲುಗಳು ಹಾಗೂ ೬೦ನೇ ನಿಮಿಷದಲ್ಲಿ ಭಾರತದ ಮಿಡ್‌ಫೀಲ್ಡರ್ ವಾಂಗ್ಖೇಮ್ ಡೆನ್ನಿ ಸಿಂಗ್ ಮಾಡಿದ ಸ್ವಯಂ ಗೋಲು ಉಜ್ಬೇಕಿಸ್ತಾನ್ ತಂಡಕ್ಕೆ ಜಯವನ್ನು ತಂದುಕೊಟ್ಟಿತು. ಕ್ವಾರ್ಟರ್ ಫೈನಲ್‌ಗೆ ಪ್ರವೇಶಿಸಲು ಮತ್ತು ೨೦೨೬ರ ಫಿಫಾ ೧೭ ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಸ್ಥಾನ ಪಡೆಯಲು ಭಾರತಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿತ್ತು. ಬಿಬಿಯಾನೊ ಫೆರ್ನಾಂಡಿಸ್ ತರಬೇತಿಯ ಭಾರತ ತಂಡವು ಈ ತಿಂಗಳ ೬ರಂದು ನಡೆದ ತನ್ನ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ೪-೦ ಅಂತರದಿಂದ ಸೋಲನುಭವಿಸಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>